ಕರ್ನಾಟಕದ ಲಯಬದ್ಧ ಬಾಷೆಯಲ್ಲಿ ಹೇಳುವ ಅವರ ಯತ್ನ ನಿಜಕ್ಕೂ ಫಲ ನೀಡಿದೆ ಎಂದೇ ನನ್ನ ಭಾವನೆ.

ಪಶ್ಚಿಮದ ಸಾಹಿತ್ಯವನ್ನೂ ಕನ್ನಡಕ್ಕೆ ತರುವಾಗ ಅವರು ಅದರದೇ ಸೂಕ್ಷ್ಮಗಳನ್ನು ಕೃತಿಯಲ್ಲಿ ತರಲು ಯತ್ನಿಸಿದ್ದು ಅತ್ಯಂತ ಸ್ಪಷ್ಟ ಎನ್ನುವುದಕ್ಕೆ ಅವರ ಎರಡು ಅನುವಾದಿತ ಕೃತಿಗಳು ಸಾಕ್ಷಿ. ಅದು 'ಧರ್ಮಪುರಿಯ ಶ್ವೇತವೃತ್ತ' (ಬರ್ತೊಲ್ಟ್ ಬ್ರೆಷ್ಟ್ ಅಥವಾ ಬ್ರೆಕ್ಟ್‌ನ 'ಕಕೇಶಿಯನ್ ಚಾಕ್ ಸರ್ಕಲ್') ನಾಟಕವಾಗಿರಬಹುದು, ಇಲ್ಲವೇ ಶೇಕ್ಸಪಿಯರ್‌ನ 'ಕಿಂಗ್ ಲಿಯರ್' ನಾಟಕ ವನ್ನಿಟ್ಟುಕೊಂಡು ಅವರು ಅನ್ವೇಷಿಸಿದ 'ನಂದಭೂಪತಿ' ಇರಬಹುದು. ಇವೆರಡರಲ್ಲಿ ಅವರು ಇಬ್ಬರು ಮಹಾನ್ ನಾಟಕಕಾರರ ಆಯಾ ಕಾಲ ಮತ್ತು ಸಂಸ್ಕೃತಿಗಳ ವೈವಿಧ್ಯತೆ ಮತ್ತು ಇಬ್ಬರೂ ನಾಟಕಕಾರರ ಆಶಯಗಳಲ್ಲಿನ ಭಿನ್ನತೆಯನ್ನು ಅರಗಿಸಿಕೊಂಡು ಇಬ್ಬರ ದನಿಗೆ ಯಾವುದೇ ಧಕ್ಕೆಯಾಗದಂತೆ ಕನ್ನಡದ ನೆಲಕ್ಕೆ ಒಗ್ಗಿಸಿಕೊಟ್ಟಿದ್ದಾರೆ.

ಅವರು 'ನಂದಭೂಪತಿ' ನಾಟಕದಲ್ಲಿ ಜನಪದ ನುಡಿಗಟ್ಟುಗಳನ್ನು ಬಳಸಿಕೊಂಡು ತುಂಬ ಅಪರೂಪದ ಲಯಬದ್ಧ ಸಾಹಿತ್ಯವನ್ನು ನೀಡಿದ್ದಾರೆ. ನಾಟಕದ ಈ ಕೆಲವು ಹಾಡುಗಳಲ್ಲಿ (ವಿಶೇಷವಾಗಿ ಹುಚಮಲ್ಲ ಪಾತ್ರ ಹಾಡುವ) ಅವರ ಜನಪದ ಲೋಕ ಜ್ಞಾನವನ್ನು ಗಮನಿಸಬಹುದು.

ಆಳದ ನೋಡಿದರೂ ತಿಳದ ನೋಡೋ ತಮ್ಮಾ
ಮಳದ ಲೆಕ್ಕಾ ನೀ ಹಾಕಬ್ಯಾಡಾ
ಹೊಳದದ್ದಕ್ಕೆಲ್ಲಾ ಹೊಂತೂಟ್ಲೇನ
ಹೊನ್ನಂಥೇಳೆ ಕೈ ಇಕ್ಕಬ್ಯಾಡಾ
....
ಗ್ವಾದ್ಲಿ ಬೇಕು ಗ್ವಾತ ಬ್ಯಾಡಂದ್ರ ಹ್ಯಾಂಗೋ ಅಣ್ಣಾ!
ಮಾದ್ಲಿ ತಿನ್ನಾವಗ ಗೊತ್ತಿರಬೇಕೋ ಗೋದಿ ಬಣ್ಣಾ!
(ಗ್ವಾತ– ಜಾನುವಾರು ಹೊಯ್ದ ಉಚ್ಚೆ, ಮಾದ್ಲಿ– ಗೋದಿ, ಬೆಲ್ಲ ಬಳಸಿ ಮಾಡುವ ಸಿಹಿ ಖಾದ್ಯ)
......

ಅವರ ಸ್ವರಚಿತ ನಾಟಕ 'ದೊಡ್ಡಪ್ಪ' ಕೃತಿಗೆ 1983ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ಸಂದಿದೆ. ಇತರ ಭಾಷೆಯ ನಾಟಕಗಳ ಅನುವಾದದತ್ತ ಗಮನ ವಹಿಸಿದ್ದೇ ಹೆಚ್ಚು. ರಂಗ ನಿರ್ದೇಶಕರ ಒತ್ತಾಸೆಗೊ, ಆಹ್ವಾನಕ್ಕೋ ಮಣಿದು ಅನುವಾದ ಮಾಡಿಕೊಟ್ಟಿದ್ದೇ ಹೆಚ್ಚು. ಅವರು 'ನಂದಭೂಪತಿ' ನಾಟಕ ರಚನೆಯಾಗಿದ್ದು ಈ ನೆಲೆಯಲ್ಲಿ. ಎನ್‌ಎಸ್‌ಡಿ ಪದವೀಧರ ಜಯತೀರ್ಥ ಜೋಶಿ ಹಕ್ಕೊತ್ತಾಯ ಮಾಡಿದ್ದರ ಫಲವಾಗಿ ಈ ನಾಟಕ ಅನುವಾದಗೊಂಡು ರಂಗಕ್ಕೂ ಬಂದಿತು. ಕಿತ್ತೂರಿನ 'ಗ್ರಾಮೀಣ ರಂಗಚೇತನ' ತಂಡಕ್ಕೆಂದು ಗೋಪಾ ಇದನ್ನು ರಚಿಸಿ ಕೊಟ್ಟಿದ್ದರು. ಆದರೆ ಅದು ಕೈಗೂಡದೇ ಧಾರವಾಡದ 'ಅಭಿನಯ ಭಾರತಿ' ಇದರ ಪ್ರಯೋಗ ಮಾಡಿತು. ದೂರದರ್ಶನದಲ್ಲಿ ಇದರ ಪ್ರಸಾರವೂ ಆಯಿತು. ಧಾರವಾಡದ ಬಸಲಿಂಗಯ್ಯ ಹಿರೇಮಠ ನಿರೂಪಕನ ಪಾತ್ರ ನಿರ್ವಹಿಸಿ ಅದ್ಭುತ ರಂಗಗೀತೆಗಳನ್ನು ರಂಗಕ್ಕೆ ನೀಡಿದ್ದನ್ನು ಹುಬ್ಬಳ್ಳಿ–ಧಾರವಾಡ ರಂಗಾಸಕ್ತರು ಮರೆಯಲು ಸಾಧ್ಯವೇ ಇಲ್ಲ. ವಿಶೇಷವಾಗಿ ಪ್ರಯೋಗಗಳ ದೃಷ್ಟಿಯಿಂದ ಈ ನಾಟಕ ಅತ್ಯಂತ ಯಶಸ್ವಿ. ನಾಡಿನ ಹಲವಾರು ತಂಡಗಳು ಈ ನಾಟಕದ ಪ್ರಯೋಗಗಳನ್ನು ಮಾಡಿವೆ.

ಚಿತ್ರ/ರಂಗ ನಟ ಶಂಕರನಾಗ್ ಅಭಿನಯದ ಮತ್ತು ಗಿರಿಶ ಕಾರ್ನಾಡ ನಿರ್ದೇಶನದ 'ಒಂದಾನೊಂದು ಕಾಲದಲ್ಲಿ' ಸಿನಿಮಾದಲ್ಲಿ ಗೋಪಾ ಪುಟ್ಟ ಪಾತ್ರ ನಿರ್ವಹಿಸುವ ಮೂಲಕ ಸಿನಿಮಾಗೆ ಎಂಟ್ರಿ ಕೊಟ್ಟರು. ನಾಗಾಭರಣ ನಿರ್ದೇಶನದ 'ಸಂತ ಶಿಶುನಾಳ ಶರೀಫ' ಸಿನಿಮಾದಿಂದ ಸಂಭಾಷಣಾಕಾರರಾಗಿಯೂ ಗಮನ ಸೆಳೆದರು. ಮುಂದೆ ಸುಂದರ ಕೃಷ್ಣ ಅರಸು ನಿರ್ದೇಶನದ 'ಸಂಗ್ಯಾ ಬಾಳ್ಯಾ' ಸಿನಿಮಾದಲ್ಲೂ ಅವರ ಸಂಭಾಷಣೆಗಳು ಗಮನ ಸೆಳೆದವು.

'ಹ್ಯಾಟ್ರಿಕ್ ಹೀರೋ' ಎಂದೇ ಹೆಸರಾದ ಶಿವರಾಜ್ ಕುಮಾರ್ ಅಭಿನಯದ ಇಂದ್ರಬಾಬು ನಿರ್ದೇಶನದ ಇತ್ತೀಚೆಗಿನ ಚಿತ್ರ 'ಸಂತೆಯಲ್ಲಿ ನಿಂತ ಕಬೀರ'ಕ್ಕೆ ಗೋಪಾಲ ವಾಜಪೇಯಿ ಅವರದೇ ಚಿತ್ರಕತೆ ಮತ್ತು ಸಾಹಿತ್ಯವಿದೆ. ಬಾಲಿವುಡ್‌ನ ಹೆಸರಾಂತ ಸಂಗೀತ ನಿರ್ದೇಶಕ ಇಸ್ಮಾಯಿಲ್ ದರ್ಬಾರ್ ಅವರ ರಾಗಸಂಯೋಜನೆಯ ಒಂದೆರಡು ಹಾಡುಗಳಂತೂ ಸೂಪರ್ ಹಿಟ್ ಆಗಿವೆ.

ಹಲವಾರು ಪ್ರಶಸ್ತಿ, ಪುರಸ್ಕಾರಗಳಿಗೆ ಪಾತ್ರರಾಗಿದ್ದ ಗೋಪಾ ಯಾವತ್ತೂ ಹಮ್ಮು ಬಿಮ್ಮು ಇಲ್ಲದೇ ಎಂಥ ಕಿರಿಯರೊಂದಿಗೂ ಸ್ನೇಹಪೂರ್ವಕವಾಗಿ ನಡೆದುಕೊಳ್ಳುತ್ತಿದ್ದರು. ಕಳೆದ ವಾರವಷ್ಟೇ ಆಪ್ತ ಗೆಳೆಯರೊಟ್ಟಿಗೆ 'ನಿಮ್ ಸಂಗ್ತಿ ಎರಡ ರೊಟ್ಟಿ ಉಣಬೇಕನಿಸ್ತೈತಿ ಕೂಡಿ ಉಣ್ಣೂನು' ಎಂದು ತಮ್ಮ ಗೆಳೆಯ ಧನಂಜಯ ಕುಲಕರ್ಣಿ ಮನೆಯೊಳಗೆ ಕಳೆದ ಭಾನುವಾರ (18 ಸೆಪ್ಟೆಂಬರ್) ರೊಟ್ಟಿ ಊಟದ ವ್ಯವಸ್ಥೆ ಮಾಡಿದ್ದರು. ಅದಕ್ಕೂ ಒಂದು ದಿನ ಮುಂಚೆ ಅನಾರೋಗ್ಯದಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಗೋಪಾ ಬರೋಬ್ಬರಿ ಎರಡೇ ದಿನಕ್ಕೆ (20 ಸೆಪ್ಟೆಂಬರ್) ತಮ್ಮ ಜೀವನದ ಸಂತೆ ಮುಗಿಸಿಯೇಬಿಟ್ಟರು.

### ಸ್ವಂತ ಕೃತಿಗಳು
ದೊಡ್ಡಪ್ಪ (ನಾಟಕ)
ಪುಟ್ಟನ ಸ್ವರ್ಗ (ನಾಟಕ)
ರಂಗದ ಒಳ ಹೊರಗೆ (ರಂಗಾನುಭವ ಕುರಿತು)

### ಅನುವಾದಿತ ರಂಗಕೃತಿಗಳು
ಸಂತ್ಯಾಗ ನಿಂತಾನ ಕಬೀರ (ಹಿಂದಿ: ಭೀಷ್ಮ ಸಹಾನಿ ಅವರ 'ಕಬೀರ ಖಡಾ ಬಾಜಾರ ಮೇ')
ಧರ್ಮಪುರಿ ಶ್ವೇತಪತ್ರ (ಮೂಲ:ಬ್ರೆಕ್ಟ್‌ನ 'ಕಕೇಶಿಯನ್ ಚಾಕ್ ಸರ್ಕಲ್')
ಹಣ್ಣೆಲೆ ಹಸಿರೆಲೆ (ಮರಾಠಿ ಮೂಲ: ತರುಣ್ ತುರ್ಕ್‌ಮಾತಾರೆ ಅರ್ಕ್)
ನಂದಭೂಪತಿ (ಶೇಕ್ಸಪಿಯರ್‌ನ 'ಕಿಂಗ್ ಲಿಯರ್')
ಆಗಮನ (ಮರಾಠಿ ಮೂಲ: ಪೇಯಿಂಗ್ ಗೆಸ್ಟ್)
ತಾಮ್ರಪತ್ರ (ಬಂಗಾಳಿ ಮೂಲ: ದೀಬಾಶಿಶ್ ಮುಜುಂದಾರ್)

### ಸಿನಿಮಾ
ಸಂತ ಶಿಶುನಾಳ ಷರೀಫ್ (ಸಂಭಾಷಣಾಕಾರರಾಗಿ ಚಿತ್ರರಂಗ ಪ್ರವೇಶ)
ಒಂದಾನೊಂದು ಕಾಲದಲ್ಲಿ (ನಟನಾಗಿ)
ಸಂಗ್ಯಾ ಬಾಳ್ಯಾ (ಸಂಭಾಷಣೆ)
ಸೂಪರ್‌ನೋವಾ (ನಟ)
ನಾಗಮಂಡಲ (ಹಾಡುಗಳು)
ತಾಯಿ ಸಾಹೇಬ
ಭೂಮಿ ಗೀತ (ಹಾಡು)
ಸಿಂಗಾರೆವ್ವ (ಹಾಡು)
ವಸುಂಧರಾ (ಹಾಡು)
1857 (ಸಾಹಿತ್ಯ)
ಸ್ನೇಕ್ ನಾಗ (ಸಾಹಿತ್ಯ)
ಸಂತೆಯಲ್ಲಿ ನಿಂತ ಕಬೀರ (ಚಿತ್ರಕತೆ– ಸಾಹಿತ್ಯ)

### ಪ್ರಶಸ್ತಿ
1981 ಕಸಾಪ ಪ್ರಶಸ್ತಿ
1983 ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ದೊಡ್ಡಪ್ಪ ಕೃತಿಗೆ)
1983 ಮೂರುಸಾವಿರ ಮಠದ ಗ್ರಂಥ ಪುರಸ್ಕಾರ
1998 ನಾಟಕ ಅಕಾಡೆಮಿ ಪ್ರಶಸ್ತಿ
2008 ಮಾಧ್ಯಮ ಅಕಾಡೆಮಿ ಪ್ರಶಸ್ತಿ
2014 ಸೇಡಂನ ಅಮ್ಮ ಪ್ರತಿಷ್ಠಾನ ಪ್ರಶಸ್ತಿ
1987–90 ನಾಟಕ ಅಕಾಡೆಮಿ ಸದಸ್ಯ.

## ಹಾಡು ಮತ್ತು ವಿವಾದ
ನಾಗಮಂಡಲ ಕೃತಿ ತರುವಾಗ ಕಾರ್ನಾಡ್ ಮತ್ತು ಗೋಪಾ ನಡುವೆ 'ಮಾಯಾದೊ ಮನದ ಭಾರ..' ಹಾಡು ಬಳಸಿಕೊಳ್ಳುವ ಬಗ್ಗೆ ಪತ್ರ ವ್ಯವಹಾರ ನಡೆದಿತ್ತು. ಹಾಡು ಬರೆದವರು ಗೋಪಾ. ಅದಕ್ಕೆ ಕಾರ್ನಾಡ್ ಒಂದೂವರೆ ಸಾವಿರ ರೂಪಾಯಿ ಸಂಭಾವನೆ ಕೊಟ್ಟಿದ್ದರು. ಕೃತಿಯ ವಿವಿಧ ಆವೃತ್ತಿ ಹೊರಬಂದವು. ಆದರೆ ಅದಾವುದರಲ್ಲೂ ಹಾಡು ಬರೆದ ಲೇಖಕ ಗೋಪಾ ಬಗ್ಗೆ ಉಲ್ಲೇಖವಿರಲಿಲ್ಲ. ಧಾರವಾಡದ ಮನೋಹರ ಗ್ರಂಥಮಾಲಾ ಹೊರತಂದ ಕಾರ್ನಾಡರ ನಾಟಕಗಳ ಸಮಗ್ರ ಸಂಪುಟದ ಪುಸ್ತಕದಲ್ಲೂ ಗೋಪಾ ಹೆಸರು ಕಾಣಿಸಲಿಲ್ಲ. ಗೋಪಾ ಸಿಡಿದೆದ್ದರು. ರಾಜೀ ಮಾಡಿಕೊಳ್ಳಲು ಬಂದ ಆಹ್ವಾನವನ್ನು ನಿರಾಕರಿಸಿ ಕೋರ್ಟ್ ಮೆಟ್ಟಿಲು ಹತ್ತಿದರು. ಈಗಲೂ ಬೆಂಗಳೂರು ಸಿವಿಲ್ ಕೋರ್ಟ್‌ನಲ್ಲಿ ಈ ಕೇಸ್ ನಡೆಯುತ್ತಿದೆ.